ಮಲಗಿಸಿದಂತಿತ್ತು. ಅಲೆಗಳು ನಿಧಾನವಾಗಿ ಚಲಿಸುತ್ತ ಮರಳು ದಂಡೆಯ ಮೇಲೆ ನಯವಾಗಿ ಹರವಿಕೊಳ್ಳುತ್ತಿದ್ದವು. ದೂರದಲ್ಲಿ ಆ್ಯಸ್ಪಿನ್‌ವಾಲ್‌ದ ಶ್ವೇತವರ್ಣದ ಮನೆಗಳು ಹಾಗೂ ತಾಳೆ ಮರಗಳು ಮಂದಹಾಸ ಬೀರುತ್ತಿದ್ದವು. ನಿಜ ಹೇಳಬೇಕೆಂದರೆ, ಅಲ್ಲಿ ಅಲೌಕಿಕವಾದ ಎಂಥದೋ ಗಾಂಭೀರ್ಯ ತುಂಬಿದ ಶಾಂತಿ ನೆಲೆಸಿತ್ತು. ಪ್ರಕೃತಿಯ ಅಂಥ ಆ ಶಾಂತತೆಯ ಮಧ್ಯದಲ್ಲಿ ಆ ವೃದ್ಧನ ನಡಗುವ ದನಿ ಕೇಳಿ ಬಂತು. ಆತ ದೊಡ್ಡ ದನಿಯಲ್ಲಿ ತನಗೇ ಚೆನ್ನಾಗಿ ಕೇಳುವಂತೆ ಅದನ್ನು ಓದತೊಡಗಿದ್ದ.

"ಓ ನನ್ನ ಜನ್ಮಭೂಮಿ ಲಿತ್ವಾ(ಲಿಥುವಾನಿಯಾ), ನೀನು ಆರೋಗ್ಯ ದೇವತೆಯ ಹಾಗೆ! ನಿನ್ನ ಬೆಲೆ ಎಷ್ಟೆಂದು ನಿನ್ನನ್ನು ತೊರೆದು ಹೋದವರಿಂದಲೇ ಕೇಳು. ಈ ದಿನ, ಪರಿಪೂರ್ಣವಾಗಿ ಅಲಂಕೃತಳಾದ ನಿನ್ನ ಅದ್ಭುತ ಚೆಲುವನ್ನು ನಾನು ವರ್ಣಿಸುತ್ತಿರುವೆ. ಏಕೆಂದರೆ, ನಾನು ನಿನಗಾಗಿ ಹಂಬಲಿಸುತ್ತಿರುವೆ."

ಸ್ಕಾವಿನ್ಸ್ಕಿಯ ಗಂಟಲು ಒತ್ತಿದಂತಾಗಿ ದನಿ ಕ್ಷೀಣವಾಯಿತು. ಆತನ ಕಣ್ಣೆದುರು ಅಕ್ಷರಗಳು ನರ್ತಿಸಲಾರಂಭಿಸಿದವು. ಆತನ ಎದೆಯಲ್ಲೇನೊ ಒಡೆದು ಚೂರಾದಂತೆ, ಹೃದಯದಿಂದ ಅಲೆ ಅಲೆಯಾಗಿ ಮೇಲೆದ್ದು ಬಂದಂತೆ, ಆತನ ದನಿಯನ್ನು ಉಸಿರುಗಟ್ಟಿಸಿ ಗಂಟಲನ್ನು ಹಿಸುಕಿದಂತಾಯಿತು. ಒಂದು ಕ್ಷಣ ತನ್ನನ್ನೇ ನಿಯಂತ್ರಿಸಿಕೊಂಡು ಮುಂದೆ ಓದ ತೊಡಗಿದ.

"ಓ ಪವಿತ್ರ ದೇವತೆಯೆ, ಪರಿಶುಭ್ರ ಚೆನ್‌ಸ್ಟೋಹೋವಾವನ್ನು ಕಾಯುವವಳೆ, ಓಸ್ಟ್ರೋಬ್ರಾಮಾವನ್ನು ಬೆಳಗುವವಳೆ, ಅರಮನೆಯ ನಗರಿ ನೌಗ್ರೋಡೆಕ್ ಹಾಗೂ ಅದರ ನಂಬಿಗಸ್ಥ ಪ್ರಜೆಗಳ ಸಂರಕ್ಷಕಳೆ, ಅಂದು ಅನಾರೋಗ್ಯದಿಂದ ಬಳಲುತ್ತಿದ್ದ ನನ್ನನ್ನು ರಕ್ಷಿಸುವಂತೆ ಪ್ರಾರ್ಥಿಸಿ, ನನ್ನ ತಾಯಿ ಅಳುತ್ತ ನನ್ನನ್ನು ನಿನ್ನ ಪಾದದಡಿಗೆ ಹಾಕಿದಾಗ ನಾನು ಜೀವ ಕಳೆದುಕೊಂಡಿದ್ದ ನನ್ನ ಕಣ್ಣೆವೆಗಳನ್ನು ಮೇಲೆಕ್ಕೆತ್ತಿ, ನೇರವಾಗಿ ನಿನ್ನ ಪವಿತ್ರ ಹೊಸ್ತಿಲೆಡೆಗೆ ಸಾಗಿ, ಬಾಲ್ಯದಲ್ಲಿ ಮರುಜೀವ ದಯಪಾಲಿಸಿದ ನಿನಗೆ ನಾನು ಕೃತಜ್ಞತೆ ಹೇಳಿದ್ದೆ. ಮತ್ತೆ ಅಂಥ ಪವಾಡ ಸೃಷ್ಟಿಸಿ, ನಾವು ನಮ್ಮ ಜನ್ಮಭೂಮಿಯ ಎದೆಯ ಅಪ್ಪಿಕೊಳ್ಳುವಂತೆ ಮಾಡು ತಾಯಿ."

ಆತನ ಮನೋಬಲದ ಕಟ್ಟೆ ಒಡೆದು ಉಬ್ಬಿದ ನರಗಳು ಶಿಥಿಲಗೊಂಡವು. ಆ ವೃದ್ಧ ಬಿಕ್ಕಳಿಸತೊಡಗಿದ. ನಂತರ, ನೆಲದ ಮೇಲೆ ಧೊಪ್ಪನೆ ಬಿದ್ದುಬಿಟ್ಟ. ಆತನ ಹಾಲಿನಂಥ ಬಿಳಿಗೂದಲು ಸಮುದ್ರ ತೀರದ ಮರಳಿನಲ್ಲಿ ಬೆರೆತು ಹೋದವು. ಆತ ತನ್ನ ದೇಶವನ್ನು ನೋಡಿ ಇದೀಗ ನಾಲ್ವತ್ತು ವರ್ಷಗಳು ಕಳೆದು ಹೋಗಿದ್ದವು. ಏತನ್ಮಧ್ಯೆ, ಅದೆಷ್ಟು ಸಲ ತನ್ನ ಮಾತೃಭಾಷೆಯನ್ನು ಕೇಳಿಸಿಕೊಂಡಿದ್ದನೊ ದೇವರೇ ಬಲ್ಲ. ಇದೀಗ ಆ ಮಾತೃಭಾಷೆ ತನ್ನಷ್ಟಕ್ಕೆ ತಾನೇ ಅವನ ಬಳಿಗೆ ಬಂದಿತ್ತು. ಅದು ಮಹಾಸಾಗರವನ್ನು ದಾಟಿ ಆತನಿದ್ದಲ್ಲಿಗೆ ಬಂದಿತ್ತು. ಭೂಮಿಯ ಒನ್ನೊಂದು ಗೋಲಾರ್ಧದಲ್ಲಿ ಏಕಾಂಗಿಯಾಗಿದ್ದ ಆತನನ್ನು ಹುಡುಕಿಕೊಂಡು ಬಂದಿತ್ತು. ಅದು ಅದೆಷ್ಟು ವಾತ್ಸಲ್ಯಮಯವಾಗಿತ್ತು, ಅದೆಷ್ಟು ಪ್ರಿಯವಾಗಿತ್ತು, ಅದೆಷ್ಟು ಸುಂದರವಾಗಿತ್ತು! ಆತನನ್ನು ನಲುಗಿಸದ ಆ ಬಿಕ್ಕಳಿಕೆಯಲ್ಲಿ ನೋವಿರಲಿಲ್ಲ, ಅಪಾರ ಪ್ರೀತಿ ಹುದುಗಿತ್ತು. ಅಂಥ ಆ ಪ್ರೀತಿಯ ಸಮಕ್ಷಮದಲ್ಲಿ ಉಳಿದುದೆಲ್ಲವೂ ಶೂನ್ಯವಾಗಿತ್ತು. ಆತ ಬಹಳಷ್ಟು ರೋಧಿಸಿದ ಮೇಲೆ ಅತ್ಯಂತ ಸಮರ್ಪಣಾ ಭಾವದೊಂದಿಗೆ ಪ್ರಾರ್ಥಿಸುತ್ತ, ತನ್ನ ಪ್ರೀತಿಯ ದೇಶದ ಕ್ಷಮೆ ಕೋರಿದ. ಅವನೀಗ ವೃದ್ಧನಾಗಿದ್ದ. ಆ ಒಂಟಿ ದ್ವೀಪಕ್ಕೆ ಅಂಟಿಕೊಂಡಿದ್ದ. ಅಲ್ಲಿ ಅದೆಷ್ಟು ಆತ ಮುಳುಗಿ ಹೋಗಿದ್ದನೆಂದರೆ, ಅನ್ಯವೆಲ್ಲದರ ಹಂಬಲವೇ ಆತನಲ್ಲಿ ಮಾಯವಾಗಿ ಹೋಗಿತ್ತು. ಒಂದು ಪವಾಡ ಸದೃಶ ರೀತಿಯಲ್ಲಿ ಮತ್ತೆ ಆ ಹಂಬಲ ಮರಳಿ